Seshadripuram Educational Trust

# ವಾಣಿ

**The Voice of Excellence**

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 34
Edition - 3
Apr - 2022

Seshadripuram Educational Trust SINCE 1930 INSTITUTIONS

ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು-560020
www.set.edu.in | info@set.edu



ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆ-2022 8



ಶ್ರೀ ಕೆ.ಎಂ. ನಂಜಪ್ಪನವರ 110ನೇ ಜನ್ಮದಿನಾಚರಣೆ ಪ್ರಯುಕ್ತ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಮೇಳ 12



Nadoja Dr. Wooday P. Krishna honoured prestigious Educationist Award of the Year 2022. 3



ಪದವಿ ಕನ್ನಡ ಪಠ್ಯ ಕಾರ್ಯಾಗಾರ 11



International Women's Day Celebrations 10



SET Merit Scholarships Distribution 2021-22 10



Commemoration to mark Centenary of Gandhi's arrival to Mysuru 10



ರೈಫಲ್ ಶೂಟಿಂಗ್ ಅಕಾಡೆಮಿಯ ಉದ್ಘಾಟನೆ 8

**For Internal Circulation only**

Book-Post

To,

If undelivered, please return it to:
Editor, 'Vani' Quaterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

**ವ್ಯವಸ್ಥಾಪಕ ಸಂಪಾದಕರು**
ಎನ್.ಆರ್. ಪಂಡಿತಾರಾಧ್ಯ

**ಪ್ರಧಾನ ಸಂಪಾದಕರು**
ನಾಡೋಜ ಡಾ. ವೂಡೇ ಪಿ. ಕೃಷ್ಣ

**ಸಂಪಾದಕರು**
ಶಾಂತಮ್ಮ, ಹಿರಿಯ ಪತ್ರಕರ್ತೆ
ಡಾ. ಕಾವ್ಯಶ್ರೀ ಎಚ್.
ಭುವನೇಶ್ವರಿ ಆರ್.ಎಸ್.
ಪವಿತ್ರ ಕುಮಾರಿ ಬಿ.ಪಿ.

**ಸಂಪಾದಕ ಮಂಡಳ**
ಎಸ್. ಶೇಷ ನಾರಾಯಣ
ಪ್ರೊ. ವಿದ್ಯಾ ಶಿವಣ್ಣವರ್
ಡಬ್ಲ್ಯೂ.ಜಿ. ರಾಮಕೃಷ್ಣ
ಪ್ರೊ. ಮಂಜುನಾಥ್ ಆರ್.ವಿ.
ಬಿ.ಎಸ್. ಲೋಕನಾಥ್
ಪ್ರೊ. ಜಿ.ಕೆ. ಮಂಜುನಾಥ್
ಪಿ.ಸಿ. ನಾರಾಯಣ
ಪ್ರೊ. ಆರ್. ಮಹಾಲಕ್ಷ್ಮಿ
ಎಮ್.ಎಸ್. ನಟರಾಜ್
ಡಾ. ಆರ್. ಮಂಜುನಾಥ್
ಡಾ. ವಿನಯ ಎಸ್.
ಪ್ರೊ. ಟಿ. ದೊಡ್ಡೇಗೌಡ
ಡಾ. ವಿಜಯಕುಮಾರ್ ಎ.ಬಿ.
ಪ್ರೊ. ಅರ್ಚನ ಸ್ವಾಮಿ ಎನ್.
ಡಾ. ಭಾರ್ಗವಿ ವಿ.ಆರ್.
ಪ್ರೊ. ಬಿ.ವಿ. ಬಸವರಾಜು
ಡಾ. ಮೀರಾ ಎಚ್.ಎನ್.
ಪ್ರೊ. ಸುಮತಿ ಸಿ.
ಡಾ. ಪ್ರಣೀತ ಬಿ.ಎಸ್.
ಎಂ.ಕೆ. ಚವ್ಹಾಣ್
ಡಾ. ಎಸ್.ಎನ್. ವೆಂಕಟೇಶ್
ನೇತ್ರಾಮಣಿ
ಪ್ರೊ. ಜಯರಾಮ್
ಬಿ.ಟಿ. ತಿಮ್ಮಪ್ಪ
ಪ್ರೊ. ಎನ್.ಎಸ್. ಸತೀಶ್
ಕೆ. ಕವಿತಾ
ಪ್ರೊ. ಸೌಮ್ಯ ಈರಪ್ಪ ಕೆ.
ಪರಿಮಳ ಎಲ್.ಕೆ.
ಪ್ರೊ. ಜಗದೀಶ್ ಟಿ.ಜಿ.
ಎಚ್.ಎನ್. ನಂದ


# ಸಂಪಾದಕೀಯ

ಸ್ವಾಮಿ ವಿವೇಕಾನಂದರು ಯುವಪೀಳಿಗೆಯ ಆದರ್ಶ ಮಾದರಿ. ಆ ಮಹಾನ್ ಚೇತನದ ಶಕ್ತಿಯನ್ನು ಪಸರಿಸುವ ಸಲುವಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯು ವಿವೇಕಾನಂದ ಅಧ್ಯಯನ ಕೇಂದ್ರಗಳನ್ನು ಆರಂಭಿಸಿದೆ. ಯುವಜನತೆಯೇ ರಾಷ್ಟ್ರದ ಶಕ್ತಿ ಎಂಬುದನ್ನು ಅರಿತಿರುವ ದತ್ತಿಯು ಯುವಜನಾಂಗದ ಸರ್ವಾಂಗೀಣ ಬೆಳವಣಿಗೆಗೆ ಸದಾ ಕಂಕಣಬದ್ಧ. ಯುವಶಕ್ತಿಯು ವ್ಯರ್ಥವಾಗದೆ ಸಮಾಜಕ್ಕೆ ಉಪಯುಕ್ತವಾಗುವಂತೆ ಮಾಡಿ, ಅವರ ಭವಿಷ್ಯವನ್ನೂ ಉಜ್ವಲಗೊಳಿಸುವುದೇ ದತ್ತಿಯ ಮುಖ್ಯ ಗುರಿಯಾಗಿದೆ. ತನ್ನ ಎಲ್ಲ ಅಂಗಸಂಸ್ಥೆಗಳ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆಯನ್ನು ಹಾಕಿಸಲಾಗಿದೆ. ತರಗತಿಗಳೊಳಗಿನ ಪಾಠಪ್ರವಚನಗಳೊಂದಿಗೆ ಪಠ್ಯೇತರ ಚಟುವಟಿಕೆಗಳಿಗೂ ಸಮಾನ ಅವಕಾಶ ನೀಡಿದೆ. ಕೋವಿಡ್ ಕಾರಣದಿಂದ ಹಿನ್ನೆಲೆಗೆ ಸರಿದಿದ್ದ ಶಾಲಾಕಾಲೇಜುಗಳ ಎಲ್ಲ ಕಾರ್ಯಕ್ರಮಗಳು ಮತ್ತೆ ಗರಿಗೆದರಿವೆ. ವಿದ್ಯಾರ್ಥಿಗಳಿಗಾಗಿ ರೈಫಲ್ ಶೂಟಿಂಗ್ ಅಕಾಡೆಮಿಯ ಸ್ಥಾಪನೆ, ದೇಹದಾರ್ಢ್ಯ ಸ್ಪರ್ಧೆ, ಎನ್‌ಎಸ್‌ಎಸ್ ಶಿಬಿರಗಳು, ಪರೀಕ್ಷಾ ಭೀತಿ ನಿವಾರಣಾ ಕಾರ್ಯಾಗಾರ, ಮಾದಕ ವ್ಯಸನದ ದುಷ್ಪರಿಣಾಗಳ ಬಗ್ಗೆ ಜಾಗೃತಿ ಹೀಗೆ ಇನ್ನೂ ಹಲವಾರು ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿದೆ. ಉತ್ತಮ ವಿದ್ಯಾರ್ಥಿಗಳು ರೂಪುಗೊಳ್ಳಲು ಸಮರ್ಥ ಶಿಕ್ಷಕರು ಅತ್ಯವಶ್ಯಕ ಎಂದು ಮನಗಂಡಿರುವ ಶಿಕ್ಷಣದತ್ತಿಯು ಕಾಲಕಾಲಕ್ಕೆ ಶಿಕ್ಷಕ ವೃಂದದಲ್ಲಿಯೂ ಹೊಸ ಸತ್ವ ತುಂಬಲು, ವಿಚಾರ ಸಂಕಿರಣಗಳು, ಉಪನ್ಯಾಸ ಮಾಲಿಕೆಗಳು, ಪಠ್ಯಪುಸ್ತಕ ಕಾರ್ಯಾಗಾರ, ಪುಸ್ತಕ ಬಿಡುಗಡೆ, ಎಫ್‌ಡಿಪಿ ಮುಂತಾದವುಗಳ ಮೂಲಕ ಉತ್ತೇಜಿಸುತ್ತಾ ಬಂದಿದೆ. ಶೇಷಾದ್ರಿಪುರಂ ಶಿಕ್ಷಣ ದತ್ತಿಯು ಅನೇಕ ವರ್ಷಗಳಿಂದ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಿ ಸಾವಿರಾರು ವಿದ್ಯಾರ್ಥಿಗಳನ್ನು ಈ ನಿಟ್ಟಿನಲ್ಲಿ ಪ್ರೇರೇಪಿಸಿದೆ. ಪ್ರಸ್ತುತ ಸಂದರ್ಭಕ್ಕೆ ಅತ್ಯವಶ್ಯಕವಾಗಿರುವ ಸರ್ವಧರ್ಮ ಸಾಮರಸ್ಯವು ನಮ್ಮ ಬದುಕಿನ ಶೈಲಿ ಆಗಬೇಕು ಎಂದು ಸಾರುವ ಅರ್ಥಪೂರ್ಣ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು. ಆದಿಕವಿ ಪಂಪನ ಮಾತಿನಂತೆ 'ಮನುಷ್ಯ ಜಾತಿ ತಾನೊಂದೇ ವಲಂ!'

**ಸಂಪಾದಕರು**
editorialvani@gmail.com







For suggestions & feedback mail us at : editorialvani@gmail.com

## In the Media


ವಿಜಯವಾಣಿ
ರಕ್ತದಾನ ಮಾಡುವುದು ಅನ್ನದಾನದಷ್ಟೇ ಶ್ರೇಷ್ಠ ಗುಣ
Bengaluru Edition
Feb 9, 2022 Page No. 7


ಪ್ರಜಾ ಪ್ರಗತಿ

ದೇಸಿ ಕಥನಗಳು ಪುಸ್ತಕ ಬಿಡುಗಡೆ

ತುಮಕೂರು

ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಗಳು ಏರ್ಪಡಿಸಿದ್ದ ರಕ್ತದಾನ ಮಹಾಮೇಳ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ತುಮಕೂರು ಶೇಷಾದ್ರಿಪುರಂ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ದುಗ್ಗೇನಹಳ್ಳಿ ಸಿದ್ದೇಶ ಸಂಪಾದಿಸಿರುವ ದೇಸಿ ಕಥನಗಳು ಪುಸ್ತಕವನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಪಂಡಿತಾರಾಧ್ಯ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಡಾ.ನಾಡೋಜ. ವೂಡೇ.ಪಿ.ಕೃಷ್ಣ ಅವರು ಬಿಡುಗಡೆ ಮಾಡಿದರು.

ಅಧ್ಯಾಪಕರು ಸದಾ ಓದು ಬರವಣಿಗೆಯಲ್ಲಿ ತೊಡಗಿಕೊಂಡು ಕ್ರಿಯಾಶೀಲವಾಗಿರಬೇಕು. ವಿದ್ಯಾರ್ಥಿಗಳಿಗೆ ಹೊಸ ಹೊಸ ಚಿಂತನೆಗಳನ್ನು ಮಾಡುವಂತೆ ಪ್ರೇರೇಪಿಸಬೇಕು. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯ ಅಧ್ಯಾಪಕರು ಕಾರ್ಯೋನ್ಮುಖರಾಗಿದ್ದಾರೆ. ದುಗ್ಗೇನಹಳ್ಳಿ ಸಿದ್ದೇಶ ಒಳ್ಳೆಯ ಕವಿ, ಇವರಿಂದ ಇನ್ನೂ ಒಳ್ಳೆಯ ಕೃತಿಗಳು ಬರಲಿ ಎಂದು ನಾಡೋಜ. ವೂಡೇ.ಪಿ.ಕೃಷ್ಣ ಆಶಿಸಿದರು.

ಡಾ.ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿ, ಈ ಕೃತಿಯು ಮೌಲ್ಯಯುತವಾದ ಲೇಖನಗಳನ್ನು ಒಳಗೊಂಡಿದೆ. ಇಲ್ಲಿನ ಲೇಖನಗಳು ಕನ್ನಡದ ವಚನ ಪರಂಪರೆ, ತತ್ವಪದ ಪರಂಪರೆ, ಆಧುನಿಕ ವಿಚಾರಗಳನ್ನು ಚರ್ಚಿಸುವ ಕೆಲಸ ಮಾಡಿದೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳಾದ ಎಂ.ಎಸ್.ನಟರಾಜು, ಕೃಷ್ಣಸ್ವಾಮಿ, ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ರಾಜು ಚಂದ್ರಶೇಖರ್, ಪ್ರಾಂಶುಪಾಲ ಪ್ರೊ. ಎನ್.ಎಸ್. ಸತೀಶ್, ಲೇಖಕ ದುಗ್ಗೇನಹಳ್ಳಿ ಸಿದ್ದೇಶ ಇದ್ದರು.

Tumkur Edition
1 Mar, 2022 Page No. 5
Powered by : eReleGo.com


ನಮ್ಮ ಬೆಂಗಳೂರು
ವಿದ್ಯಾರ್ಥಿ ಮಾರ್ಗದರ್ಶಿನಿ ಕ್ರಾಂತಿಕಾರಕ


ಸಂಯುಕ್ತ ಕರ್ನಾಟಕ
01 ಮಾರ್ಚ್ 2022 ಮಂಗಳವಾರ ಬೆಂಗಳೂರು 03


ಆಂದೋಲನ
'ಗಾಂಧಿಗೆ ಪೌರ ಸನ್ಮಾನ'ದ ಕ್ಷಣ ನೆನೆದ ಮೈಸೂರು!


ಗಾಂಧಿವಾದಿಗಳಿಗೆ ಸನ್ಮಾನ


ಮಹಾತ್ಮಗಾಂಧೀಜಿ ಅವರಿಗೆ ಮೈಸೂರಲ್ಲಿ ಪೌರ ಸನ್ಮಾನ ಸ್ಮರಣೆ


City commemorates civic honour to Gandhiji in 1927


ಕಷ್ಟದಲ್ಲಿ ನೆರವು ನೀಡುವವರು ದೈವ ಸ್ವರೂಪಿಗಳು


ವಿದ್ಯಾದಾನ ಮಹಾದಾನ


ರಕ್ತ ಕೊಟ್ಟು ಇನ್ನೊಬ್ಬರ ಜೀವ ಉಳಿಸಿ


ಹೊಸ ದಿಗಂತ
ರಕ್ತದಾನ ಮಹಾದಾನ: ಶಿವಾನಂದ



"ಒಂದು ಸಾಮಾನ್ಯ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರೆಯುತ್ತದೆ." – ಸ್ವಾಮಿ ವಿವೇಕಾನಂದ

# Congratulations



## Prestigious Educationist Award 2022

Nadoja Dr. Wooday P. Krishna receiving Bangalore Management Associations Prestigious Educationist Award of the Year 2022 in Bengaluru, on 19.3.2022. ISRO Former Chairman Padmashree Dr. A.S. Kiran Kumar, member of Rajya Sabha K.C. Ramamurthy and others were present during the occasion.



## Dr. Meera H.N.

Principal, Seshadripuram college is nominated as the member for State NCC Advisory Committee 2021-22 by Govt. of Karnataka. Also appointed by the Bengaluru City University as a member of the State NSS Advisory Committee, 2021-22 & 2022 -2023.



## Jayanth H.

Assistant professor, Seshadripuram First Grade College, Yelahanka, Bengaluru received "Best Faculty" award from "Jataayu staffing force private limited" in IRESFO - Indian Excellence award.



## Ph.D. Awarded
## Dr. Mohana H.K.

Seshadripuram First Grade College, Yelahanka has been awarded Doctor of Philosophy (Ph.D) degree in Science from Bangalore University for the thesis entitled "Quality of Experience Enhancement Strategies in LTE and LTE-Advanced Networks", under the guidance of Dr. J.T. Devaraju, Professor, Dept. of E.S.R. (Evaluation), Bangalore University.



## ಶಾಂತಮ್ಮ

'ಮಾಧ್ಯಮ ಬಳಗ'ದ ಅಧ್ಯಕ್ಷೆಯಾಗಿ ಹಿರಿಯ ಪತ್ರಕರ್ತೆ ಶಾಂತಮ್ಮ, 2022–2027ರ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಕಾರ ಇಲಾಖೆಯ ಮೂಲಗಳು ತಿಳಿಸಿವೆ.



## ಡಾ. ಎಸ್. ರಾಮಲಿಂಗೇಶ್ವರ

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ. ಎಸ್. ರಾಮಲಿಂಗೇಶ್ವರ ಅವರಿಗೆ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು 2021ನೇ ಸಾಲಿನ 'ಡಾ. ಎಚ್.ಎನ್. ಪ್ರಶಸ್ತಿ'ಯನ್ನು ಶಿವಮೊಗ್ಗದ ಕುವೆಂಪು ಕಲಾ ಮಂದಿರದಲ್ಲಿ ವಿಶ್ವ ಮಾನವ ದಿನಾಚರಣೆ ಸಮಾರಂಭದಲ್ಲಿ ದಿ: 29.12.2021ರಂದು ನೀಡಿ ಗೌರವಿಸಿದೆ.



ಡಾ. ಶೋಭಾ ಎಂ.ಸಿ.
ಬಿ.ಎಸ್.ಡಬ್ಲ್ಯು
(ಕನ್ನಡ ವಿಭಾಗ)



ರೂಪಶ್ರೀ ಯು.
ಬಿ.ಕಾಂ. ಮತ್ತು ಬಿ.ಬಿ.ಎ
(ಇಂಗ್ಲಿಷ್ ವಿಭಾಗ)



ಡಾ. ಚೇತನ ಎಂ.ಆರ್.
ಬಿ.ಕಾಂ. ಮತ್ತು ಬಿ.ಬಿ.ಎ
ಬೆಂಗಳೂರು ಉತ್ತರ ವಿ.ವಿ ಬಿ.ಬಿ.ಎ
(ವಾಣಿಜ್ಯ ವಿಭಾಗ)



ಪ್ರೊ. ಆಶಾ ಜಿ.
ಬಿ.ಸಿ.ಎ
(ಕನ್ನಡ ವಿಭಾಗ)

## ಬೆಂಗಳೂರು ವಿಶ್ವವಿದ್ಯಾಲಯ ಪಠ್ಯಪುಸ್ತಕ ಸಮಿತಿಯ ಸಂಪಾದಕರು

ಬೆಂಗಳೂರು ವಿಶ್ವವಿದ್ಯಾಲಯದ 2020–2021ರ ರಾಷ್ಟ್ರೀಯ ಶಿಕ್ಷಣ ನೀತಿಯ ಹೊಸ ಪಠ್ಯಪುಸ್ತಕ ಸಮಿತಿ ಮತ್ತು ರಚನೆಯಲ್ಲಿ ಸಂಪಾದಕರಾಗಿ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ ಶಾಖೆಯ ಉಪನ್ಯಾಸಕರು ಆಯ್ಕೆಯಾಗಿದ್ದಾರೆ.

# Achievements

## Seshadripuram First Grade College
Yelahanka



### ISO Certification

Seshadripuram First Grade College, Yelahanka is ISO certified. The institution is practicing Quality Management System in accordance with ISO – 9001: 2015.

## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು
ಮೈಸೂರು



ಕಾಲೇಜಿನ ವಿದ್ಯಾರ್ಥಿಗಳು ಒವೆಲ್ ಆವರಣದಲ್ಲಿ ದಿ: 27.11.2021 ರಂದು ನಡೆದ ತಾಲ್ಲೂಕು ಮಟ್ಟದ 4x400 ರಿಲೇ ವಿಭಾಗದಲ್ಲಿ ಕುಶಾಲ್ ಕೆ. ಚಿನ್ನದ ಪದಕವನ್ನು, 800 ಮೀ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು; ಆಫ್ಘನ್, ಮೋಹಿಷ್ ಸಿಂಗ್, ಮತ್ತು ಆದಿತ್ಯ ಎಲ್.ಎಸ್. 4x400 ರಿಲೇ ಓಟದಲ್ಲಿ ಚಿನ್ನದ ಪದಕವನ್ನು; ಕುಸುಮ ಕೆ., ಕಾಟ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಹಾಗೂ ಶೋಟೋಖಾನ್ ಕರಾಟೆ ಡು ಸ್ಪೋರ್ಟ್ಸ್ ಅಸೋಸಿಯೇಷನ್ ಅವರು ಆಯೋಜಿಸಿದ್ದ 3ನೇ ರಾಷ್ಟ್ರೀಯ ಓಪನ್ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

## Seshadripuram High School
Yelahanaka



### Kum. Amrutha V.

9th std, has received a certificate of participation in the record event "Largest Bharatanatyam dance lesson" organized by The Thyagayya Charitable Trust, Chennai, India, which had 416 participants and was hosted on 2 Feb, 2022 at Chennai, Tamil Nadu.

## Seshadripuram Public School
Yelahanaka



### Inspire Awards

Grade VI to IX students had participated in the Inspire Awards- Manak scheme, a flagship programme of the Department of Science and Technology, Government of India. Akshay J- Grade VII, Tanvi - Grade VIII and Harsimran Kaur - Grade IX were awarded a cash prize of Rs. 10,000 each.

"Woman is the companion of man, gifted with equal mental capacity" – Mahatma Gandhi

## Seshadripuram Degree College
### Seshadripuram




Dr. Bhargavi V.R. Director, PG Department, Seshadripuram College has published her 16th book 'Knowledge Management and Innovation'.

Dr. Urmila is appointed as an Editorial Board Member in VIT Press, an International Journal of Language and Linguistics. She also received 'Rudra Ratna Award' from Shree Om Gurukul and Brijbhoomi Foundation India.






Mrs. Shruthi, Dept. of Physical Education received "Gandhi-Vivekananda Sadbhavana Award" for achievement in Sports.

Students of Seshadripuram College secured Two Gold Medals and Two Bronze Medals in BCU Intercollegiate Taekwondo Men and Women Championship 2021-22.



## Seshadripuram PU Main College
### Seshadripuram



On 18th Feb, 2022, Darshini G.K. of Ist PU has brought laurels to the college by bagging Silver Medal in "Idhyam All India Open Tennicoit Tournament" conducted at Thiruthangal, Tamilnadu.

## Seshadripuram Institute of Commerce and Management
### Seshadripuram



NCC Cadet Govind S G from SICM has been awarded Chief Minister's Commendation Medal for his outstanding performance in All India G V Mavlankar Shooting Championship for the year 2020-21.



Captain R. Chhikkarangaswamy, NCC Officer, SICM has been awarded Chief Minister's Commendation Gold medal for his dedicated Services and Achievements in NCC from 10 years.




Seshadripuram Institute of Commerce and Management is recognized by the Higher Education Review as one among the top 10 BBA colleges -2022.

## Seshadripuram Degree College
### Mysuru



Ms. Monisha C R, has emerged as the Mysore University Banking subject topper in Bachelor of Commerce (B.Com) for the Academic Year 2020-2021. She has bagged the below mentioned endowment awards at the 102nd Annual Convocation of 2021-22.

1) Gummalapuram Kaveramma Prof. K S Srikanteshwara Iyer Gold Medal. 2) Canara Bank Diamond Jubilee Prize. 3) Prof. S Balasubramanya Commemoration Endowment Cash Prize. 4) Syndicate Bank Golden Jubilee Prize.

# Events

## Seshadripuram English High School
### Kumara Park
### Career Counseling Program




On 5th Feb, 2022, A Career Counseling session was organized for students /parents of grade X. Mr. Ramesh Kolantara from Nirmaan Organization was invited to give insights on career options. Sri G.K. Manjunath, Principal, Seshadripuram Composite P.U. College graced the occasion.

## Seshadripuram Higher Primary School
### Yelahanka
### Fancy Dress Competition



Seshadripuram Higher Primary School, Yelahanka conducted Fancy dress competition on 18th February 2021 for children of 1st Grade to 4th Grade. The theme was national symbols and the students participated enthusiastically.

## Seshadripuram English High School
### Kumara Park
### Graduation Day - 2022




On 5th Mar. 2022, Graduation Day was held for 10th Std. Students. The Chief Guest was Dr. H.V. Venugopal, Retired Principal of National College, Basavanagudi, Presided by Sri S. Seshanarayana, Hon. Joint Secretary, S.E.T. Sri. M.S. Nataraj, Chairman, Betterment Committee and Asst. Secretary, S.E.T, Principal Smt. V. Nethramani was present.

"ಎಲ್ಲರೂ ಸುಖವಾಗಿರುವ ತನಕ ಯಾರೂ ಸುಖವಾಗಿರಲಾರರು, ಆದ್ದರಿಂದ ನಾವೆಲ್ಲ ಒಂದೇ ಎಂಬ ಐಕ್ಯಮಂತ್ರವನ್ನು ಹೇಳಿರಿ." – ಸ್ವಾಮಿ ವಿವೇಕಾನಂದ

## Seshadripuram Degree College

### Seshadripuram

### 'Vachanakaras and social thoughts'




The Department of Kannada organized a special lecture on 'Vachanakaras and social thoughts' by Dr. Ganesh Bhatt. It took initiative for release of an e-content blog called 'Prakarsha Mantapa' which is a platform for students and teachers to express their thoughts by means of poems, articles, photography and essays. A wall magazine 'Shashank' was also released at this event.

### Annual Alumni Meet



On Sat, 12th Mar, 2022, Seshadripuram College old student's Association (SCOSA) conducted the Annual Alumni Get together. The distinguished Alumnus awardees and Mr. PratapLingaiah, State NSS officer, NSS cell, Government of Karnataka and Major Rakesh, Indian Army and Sri M S Nataraj, chairman, Governing Council along with SCOSA registered members graced the occasion.

## Seshadripuram Composite Pre University College

### Seshadripuram

### Parent Teachers' Meet




In the month of February 2022, SCPUC organized Parent Teachers' Meet for I PU and II PU classes. The Meet was conducted over a period of 14 days adhering to the COVID protocol. The main objective of the Meet was to create a platform for parents and teachers to discuss and devise ways to enrich the learning experience. The Meet was highly appreciated by all the stakeholders.

## Seshadripuram School

### Yelahanka

### 'Kalasammelana'



Seshadripuram School, Yelahanka New Town, B-64 celebrated club valedictory function on 4th Mar, 2022 with great pomp. It was followed by a grand exhibition put up by different clubs. The function was inaugurated by Honorary. General Secretary Nadoja Dr. Wooday P. Krishna and other Trustees. Dr. Keerthihas H.P. an alumni of our school was the Chief Guest of the programme.

## Seshadripuram P.U. College

### Yelahanka

### Industrial Tour




On 14th & 15th Feb, 2022, an Industrial tour was organized for the students.

### Parakram Diwas




On 24th Jan, 2022, Parakram Diwas was observed to commemorate the Birth Anniversary of Netaji Subash Chandra Bose.

## Seshadripuram Institute of Commerce and Management

### Seshadripuram

### Webinar on "Understanding Practical Implications of Labor Law"



Aikya, the Center for Career Development had organized a webinar on Understanding Practical Implications of Labour Law for students. The Resource person for the event was Sri Ram Prasad VK , Founder and Consultant, Total Corporate Services.

"I measure the progress of a community by the degree of progress which women have achieved." – Dr. B R Ambedkar

## Seshadripuram Degree College

Mysuru

### Meditation is Wellness



On 2nd Mar, 2022, a faculty development program on 'Meditation is Wellness' had been organized. Mr. Santhosh Kumar, Economics professor, and Yoga Instructor had taken the lead.

### Street Play – AVVA



On 17th Feb, 2022, at Chandagiri Koppalu, Srirangapattana, to empower villagers of Chandagiri Koppalu at the ongoing NSS Camp as part of 'Azadi Ki Amrit Mahotsav', a "Street play based on Women Empowerment" was organized. The street play titled "Avva" was performed successfully. Sri Prakash Sangappa Helavara, senior civil Judge, JMFC, was invited to take part in the event.

### "Chethana - 2022"



On 12th Feb, 2022, the 5th Alumni Meet - 'Chethana-2022' had been organized. The Principal, Prof. Sowmya Erappa. K, delivered presidential speech. Mr. Vishal Ajay D'Souza N was honored for his astounding achievement in academics.

## Seshadripuram PU Main College

Seshadripuram

### COVID-19 Vaccination Drive



On 5th Jan, 2022, COVID-19 Vaccination drive in association with BBMP was organized in Seshadripuram PU Main College. The event was inaugurated by Nadoja Dr. Wooday P Krishna. The first dose of vaccination was given for first and second P U students. The second dose vaccination was given on 17th Feb, 2022.



### Colour Week Celebration

From 27th December to 1st January, Color Week was celebrated and culminated with Ethnic Day in Seshadripuram PU Main College campus.



### Ethnic Day Celebration

On 1st January 2022, Ethnic day was celebrated in College campus. Mr. and Miss. SPUC were also crowned on the same day.



### Parent-Teacher Meet

Parent-Teacher meeting for first PU Science and Commerce was held on 11th & 12th February in College. Parent-Teacher meeting for second PU Science and Commerce was held on 22nd & 25th February in Seshadripuram PU Main College.

## Seshadripuram First Grade College

Yelahanka

### Bengaluru Urban District Level Mock Parliament




On 14th Jan, 2022, NSS Volunteers participated in Bengaluru Urban District Level Mock Parliament held. Ms. Anvitha N, was conferred with 1st Place and other 13 NSS-SFGC Volunteers Secured Consolation Prizes. The event was organized by Department of Youth Affairs and Sports, Bengaluru Urban, Government of Karnataka on the occasion of Swami Vivekananda's 159th Birth Anniversary.

### Job Fair @ SFGC



On 9th Mar, 2022, Karnataka Skills Corporation Bangalore, District Skill Mission organized a Job fair in collaboration with Seshadripuram First Grade College, Yelahanka Newtown, Bengaluru. The Chief guest was Mr. J Manjunath, IAS, District collector.

"ಮೃಗಸದೃಶವಾದವನನ್ನು ಮಾನವನನ್ನಾಗಿ ಮಾಡುವ, ಮಾನವನನ್ನು ದೇವರನ್ನಾಗಿ ಮಾಡುವ ಭಾವನೆಯೇ ಧರ್ಮ." – ಸ್ವಾಮಿ ವಿವೇಕಾನಂದ

## Seshadripuram Academy of Business Studies
Kengeri

### A session on "Rediscover inner Potential"



On 28th Dec, 2021, Student counseling cell in association with Department of Commerce and Management organized a Session on "Rediscover inner Potential". The Resource person was Smt. Manvitha Masgode (Counseling Psychologist, NLP Master Practitioner TTT certified, Leadership Trainer, Educator, International Trainer and Coach).

## ಶೇಷಾದ್ರಿಪುರಂ ಕಾಲೇಜು
ಶೇಷಾದ್ರಿಪುರಂ

### ಅಂತರಕಾಲೇಜು ಬೆಸ್ಟ್ ಫಿಸಿಕ್ ಸ್ಪರ್ಧೆ 2021–22

ಕಾಲೇಜಿನ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಅಂತರ ಕಾಲೇಜು ಬೆಸ್ಟ್ ಫಿಸಿಕ್ ಸ್ಪರ್ಧೆಯು ಫೆ.23ರಂದು ನಡೆಯಿತು. ಅರ್ನಾಲ್ಡ್ ಮನೋಜ್‌ಕುಮಾರ್ ಅಂತರರಾಷ್ಟ್ರೀಯ ಬಾಡಿ ಬಿಲ್ಡರ್, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಾಡೋಜ ಡಾ. ವೂಡೇ ಪಿ. ಕೃಷ್ಣರವರು



ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸ್ಪರ್ಧೆಯಲ್ಲಿ 20 ಕಾಲೇಜುಗಳು ಭಾಗವಹಿಸಿದ್ದವು. ಕಾರ್ಯಕ್ರಮದಲ್ಲಿ ಎಂ.ಎಸ್. ನಟರಾಜ್, ಚೇರ್ಮನ್, ಗೌರ್ನಿಂಗ್ ಕೌನ್ಸಿಲ್, ಪ್ರಾಂಶುಪಾಲರು ಡಾ. ಹೆಚ್.ಎನ್. ಮೀರಾ, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಕಾರ್ತಿಕ್ ಕೆ.ಎಸ್. ಮತ್ತು ಶೃತಿ ಭಾಗವಹಿಸಿದ್ದರು.

### 'ದೇಸಿ ಕಥನಗಳು' ಕೃತಿ ಲೋಕಾರ್ಪಣೆ




ಶೇಷಾದ್ರಿಪುರಂ ಸಮೂಹ ಸಂಸ್ಥೆ ಸಭಾಂಗಣದಲ್ಲಿ ದುಗ್ಗೇನಹಳ್ಳಿ ಸಿದ್ದೇಶರವರು ಸಂಪಾದಿಸಿರುವ ದೇಸಿ ಕಥನಗಳು, ಸಂಶೋಧನಾ ಲೇಖನಗಳ ಸಂಗ್ರಹದ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು. ನಾಡೋಜ ಡಾ. ವೂಡೇ ಪಿ. ಕೃಷ್ಣ, ಗೌರವ ಪ್ರಧಾನ ಕಾರ್ಯದರ್ಶಿ, ಶ್ರೀ ಎನ್.ಆರ್. ಪಂಡಿತಾರಾಧ್ಯ, ಅಧ್ಯಕ್ಷರು, ಗೌರವ ಸಹಾಯಕ ಕಾರ್ಯದರ್ಶಿ ಎಂ.ಎಸ್. ನಟರಾಜ್, ಧರ್ಮದರ್ಶಿ ಕೆ. ಕೃಷ್ಣಸ್ವಾಮಿ, ಜಾನಪದ ವಿದ್ವಾಂಸ ಮೀರಾಸಾಬೀಹಳ್ಳಿ ಶಿವಣ್ಣ, ರಾಜುಚಂದ್ರಶೇಖರ್, ಲೇಖಕ ದುಗ್ಗೇನಹಳ್ಳಿ ಸಿದ್ದೇಶ ಹಾಗೂ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನಾಚರಣೆ

## ಶೇಷಾದ್ರಿಪುರಂ ಪದವಿ ಕಾಲೇಜು
ತುಮಕೂರು




ಕಾಲೇಜಿನ ವಿವೇಕಾನಂದ ಅಧ್ಯಯನ ಕೇಂದ್ರ ಹಾಗೂ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ, ಬೆಂಗಳೂರಿನ ವಿವೇಕಹಂಸ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ 'ವಿವೇಕಸಂಚಲನ – ವಿವೇಕಮಂಥನ' ಎಂಬ ಶೀರ್ಷಿಕೆಯಡಿಯಲ್ಲಿ ವಿಶೇಷ ಉಪನ್ಯಾಸ ಆಯೋಜಿಸಿತ್ತು. ವಿವೇಕಹಂಸ ಸಂಸ್ಥೆ ಹಾಗೂ ಬೆಂಗಳೂರು ರಾಮಕೃಷ್ಣಮಠದ ಸ್ವಯಂಸೇವಕರಾದ ಸಂದೀಪ್ ವಸಿಷ್ಠ ಅವರು ಉಪನ್ಯಾಸ ನೀಡಿದರು.

## ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು
ಮೈಸೂರು



ದಿನಾಂಕ 12.1.2022ರಂದು 'ವಿವೇಕ ಹಂಸ' ಸಂಸ್ಥೆಯ ಸಹಯೋಗದೊಂದಿಗೆ 'ರಾಷ್ಟ್ರೀಯ ಯುವದಿನ ವಿವೇಕಸಂಚಲನ–2022' ಸಮಾರಂಭವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಇಂಗ್ಲೀಷ್ ಉಪನ್ಯಾಸಕರಾದ ಎಸ್.ಆರ್. ರಮೇಶ್ ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

## ಶೇಷಾದ್ರಿಪುರಂ ಪದವಿ ಕಾಲೇಜು
ಮೈಸೂರು




ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ರಾಷ್ಟ್ರೀಯ ಸೈನ್ಯ ದಳ, ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಕರ್ನಾಟಕ ಸರ್ಕಾರ ವಾರ್ತಾ ಇಲಾಖೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮೈಸೂರು, ನೆಹರು ಯುವಕೇಂದ್ರ, ಮೈಸೂರು, ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾನಿಲಯ, ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 17.01.2022ರಂದು ಸ್ವಾಮಿ ವಿವೇಕಾನಂದರ ಜನ್ಮದಿನ ಮತ್ತು 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ 'ಕಾನೂನು ಸೇವೆಗಳ ಕುರಿತು ಅರಿವು' ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ದೇವರಾಜ ಭೂತೆ, ಹಿರಿಯ ಸಿವಿಲ್ ನ್ಯಾಯಾಧೀಶರು, ಕಾರ್ಯಕ್ರಮವನ್ನು ಉದ್ಘಾಟಿಸಿದರು.

## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು ಹಾಗೂ ಶೇಷಾದ್ರಿಪುರಂ ಕಾಮರ್ಸ್ ಕಾಲೇಜು
ಮಾಗಡಿ ರಸ್ತೆ




ದಿ: 12.01.2022ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ರಾಮಕೃಷ್ಣ ಮಠದ ಪೂಜ್ಯಶ್ರೀ ಸ್ವಾಮಿ ಧರ್ಮವ್ರತಾನಂದಜಿ ಮಹಾರಾಜ್ ಆಗಮಿಸಿದ್ದರು.

"Women are the largest untapped reservoir of talent in the world" – Hillary Clinton

# 73rd Republic Day 2022

## ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 73ನೇ ಗಣರಾಜೋತ್ಸವ -2022

### ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ



ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆವರಣದಲ್ಲಿ 73ನೇ ಗಣರಾಜೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ರೈಫಲ್ ಶೂಟಿಂಗ್ ಅಕಾಡೆಮಿಯ ಉದ್ಘಾಟನೆ ನಡೆಯಿತು. ಧ್ವಜಾರೋಹಣವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ ಗೌರವ ಕಾರ್ಯದರ್ಶಿ ಸಂತೋಷ ಮೆನನ್ ನೆರವೇರಿಸಿದರು.

ಶೂಟಿಂಗ್ ಅಕಾಡೆಮಿ ಉದ್ಘಾಟನೆಯನ್ನು ಅಂತರರಾಷ್ಟ್ರೀಯ ಪಿಸ್ತೂಲ್ ಶೂಟರ್, ಒಲಂಪಿಕ್ ಕ್ರೀಡಾಪಟು ಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಪ್ರಕಾಶ್ ನಂಜಪ್ಪ ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರು ಶ್ರೀ ಎನ್.ಆರ್. ಪಂಡಿತಾರಾಧ್ಯ ಅವರು ವಹಿಸಿಕೊಂಡಿದ್ದರು, ಗೌರವ ಅತಿಥಿಗಳಾಗಿ ಅಧ್ಯಕ್ಷರು, ಗಾಂಧೀ ಸ್ಮಾರಕ ನಿಧಿ ಮತ್ತು ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಸ್ತ್ರೀ ಸಮಾಜ, ಮಾಧ್ಯಮಿಕ ಶಾಲೆ, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರಂ ಕಾನೂನು ಮಹಾ ವಿದ್ಯಾಲಯ, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳು ಭಾಗವಹಿಸಿದ್ದವು. ವೇದಿಕೆಯಲ್ಲಿ ಧರ್ಮದರ್ಶಿ ಶ್ರೀ ಡಬ್ಲ್ಯು.ಡಿ. ಅಶೋಕ್, ರಾಜು ಚಂದ್ರಶೇಖರ್, ರೆಡ್‌ಕ್ರಾಸ್ ಬ್ಲಡ್ ಬ್ಯಾಂಕ್ ರಾಜ್ಯ ಸಂಚಾಲಕರು ಹಾಗೂ ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರುಗಳು ಭಾಗವಹಿಸಿದ್ದರು.

### ಶೇಷಾದ್ರಿಪುರಂ ಪ್ರೌಢಶಾಲೆ
ಶೇಷಾದ್ರಿಪುರಂ

**ಬಹುಮಾನ ವಿತರಣಾ ದಿನ**



ದಿನಾಂಕ 17.02.2022ರಂದು 2021-22ನೇ ಸಾಲಿನ ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಶ್ರೇಯೋಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಬಿ.ಸಿ. ಲೋಕನಾಥ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಲಾ ಶ್ರೇಯೋಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ ಡಬ್ಲ್ಯು.ಡಿ. ಅಶೋಕ್‌ರವರು ಆಗಮಿಸಿದ್ದರು.

### ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು ಹಾಗೂ ಪದವಿ ಕಾಲೇಜು ಮೈಸೂರು



ಮೈಸೂರಿನ ರಂಗಾಯಣದ ನಿರ್ದೇಶಕರಾದ ಅಡ್ಡಂಡ ಸಿ. ಕಾರ್ಯಪ್ಪನವರು ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

### ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು
ಮಾಗಡಿ ರಸ್ತೆ



ಆಡಳಿತ ಮಂಡಳಿ ಸದಸ್ಯರಾದ ಜಿ. ಶ್ರೀನಿವಾಸುಲು ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

### ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜು
ಯಲಹಂಕ



ಜನರಲ್ ತಿಮ್ಮಯ್ಯ, ನ್ಯಾಷನಲ್ ಅಕಾಡೆಮಿ ಆಫ್ ಅಡ್ವೆಂಚರ್, ಕರ್ನಾಟಕ ಸರ್ಕಾರದ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಲಹೆಗಾರರಾದ ಮಂಜುನಾಥ್ ಎಂ.ಆರ್. ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದತ್ತಿಯ ಟ್ರಸ್ಟಿಗಳಾದ ಕೆ. ಕೃಷ್ಣಸ್ವಾಮಿ ವಹಿಸಿದ್ದರು.

### ಶೇಷಾದ್ರಿಪುರಂ ಪಬ್ಲಿಕ್ ಶಾಲೆ
ಯಲಹಂಕ

**ಭಾಷಾ ದಿನಾಚರಣೆ**



ದಿನಾಂಕ 11.2.2022ರಂದು ಶೇಷಾದ್ರಿಪುರಂ ಪಬ್ಲಿಕ್ ಶಾಲೆಯ ಆವರಣದಲ್ಲಿ ನಡೆದ ಭಾಷಾ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಪದವಿ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಮುರಳೀಧರ್ ಮತ್ತು ನ್ಯಾಷನಲ್ ಕಾಲೇಜ್ ಆಫ್ ಜರ್ನಲಿಸಂನ ಉಪನ್ಯಾಸಕಿ ಮೀನಾಕುಮಾರಿ ಆಗಮಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಶ್ರೇಯೋಭಿವೃದ್ಧಿ ಸಮಿತಿಯ ಅಧ್ಯಕ್ಷರು ಮತ್ತು ವಕೀಲರಾದ ಕೆ. ಕೃಷ್ಣಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

"ನಿಮ್ಮನ್ನು ನೀವು ಜಯಿಸಿ, ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ." - ಸ್ವಾಮಿ ವಿವೇಕಾನಂದ

## ಶೇಷಾದ್ರಿಪುರಂ ಪದವಿ ಕಾಲೇಜು

ಮೈಸೂರು

### ರಾಷ್ಟ್ರೀಯ ಶಿಕ್ಷಣ ನೀತಿ : ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ



ಇಲ್ಲಿನ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ, ಗಣಕ ವಿಜ್ಞಾನ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ ಇವರ ಸಹಯೋಗದಲ್ಲಿ ದಿನಾಂಕ 25.01.2022ರಂದು ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ರಾಜ್ಯಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ ನಡೆಯಿತು. ಪ್ರೊ. ಲೋಕನಾಥ್ ಎನ್.ಕೆ., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ ಇವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾದ ಪ್ರೊ. ಬಿ. ನಾಗರಾಜು, ವಾಣಿಜ್ಯ ವಿಭಾಗ, ಮೈಸೂರು ವಿಶ್ವ ವಿದ್ಯಾನಿಲಯ, ಮತ್ತು ಪ್ರೊ. ಎಚ್.ಎಸ್. ನಾಗೇಂದ್ರಸ್ವಾಮಿ, ಗಣಕ ವಿಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಇವರು ಉಪನ್ಯಾಸ ನೀಡಿದರು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ

### ಕಾಲೇಜು ವಾರ್ಷಿಕ ಪತ್ರಿಕೆ 'ಕಲರವ' ಬಿಡುಗಡೆ



ಕಾಲೇಜಿನ ವಾರ್ಷಿಕ ಪತ್ರಿಕೆ 'ಕಲರವ' ಬಿಡುಗಡೆ ಕಾರ್ಯಕ್ರಮಕ್ಕೆ ಕಾಲೇಜಿನ ಹಿರಿಯ ವಿದ್ಯಾರ್ಥಿನಿಯಾದ ತೇಜಶ್ರೀ ನಾರಾಯಣ್, ಮ್ಯಾನೇಜಿಂಗ್ ಪಾರ್ಟ್ನರ್ ಜಿ.ವಿ. ಗ್ಲೋಬಲ್ ಸರ್ವೀಸಸ್ ಎಲ್.ಎಲ್.ಪಿ. ಇವರು ಮುಖ್ಯ ಅಥಿತಿಗಳಾಗಿ ಆಗಮಿಸಿ ಪತ್ರಿಕೆ ಬಿಡುಗಡೆ ಮಾಡಿದರು. ಪ್ರಾಂಶುಪಾಲರು ಡಾ. ಎಸ್.ಎನ್. ವೆಂಕಟೇಶ್ ಭಾಗವಹಿಸಿದ್ದರು.

### 'ಕವಿದಿನ' ಆಚರಣೆ




ಕಾಲೇಜಿನ ಕನ್ನಡ ವಿಭಾಗ ಹಾಗೂ ಕನ್ನಡ ಸಂಘವು ದಿ: 31.1.2022ರಂದು ಬೇಂದ್ರೆ ಹುಟ್ಟಿದ ದಿನದ ಅಂಗವಾಗಿ 'ಕವಿದಿನ'ವನ್ನು ಆಚರಿಸಿತು. ಇದರ ಅಂಗವಾಗಿ ಉಪನ್ಯಾಸ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

## ಶೇಷಾದ್ರಿಪುರಂ ಪದವಿ ಕಾಲೇಜು

ತುಮಕೂರು

### "ತಂತ್ರಜ್ಞಾನ ಮತ್ತು ಅಂತರ್ಜಾಲ ಸಂಪನ್ಮೂಲ" – ಕಾರ್ಯಾಗಾರ



ಕಾಲೇಜಿನ ಗ್ರಂಥಾಲಯದ ವತಿಯಿಂದ ವಿದ್ಯಾರ್ಥಿಗಳಿಗಾಗಿ "ತಂತ್ರಜ್ಞಾನ ಮತ್ತು ಅಂತರ್ಜಾಲ ಸಂಪನ್ಮೂಲ" ಎಂಬ ವಿಷಯ ಕುರಿತು ಅಂತರ್ಜಾಲ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ರಾಜೇಂದ್ರ ಬಾಬು ಹೆಚ್. ಉಪನ್ಯಾಸ ನೀಡಿದರು.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ

### ವಾರ್ಷಿಕ ಕ್ರೀಡಾಕೂಟ



ಕಾಲೇಜಿನ 2021–2022ರ ಸಾಲಿನ 16ನೇ ವಾರ್ಷಿಕ ಕ್ರೀಡಾಕೂಟವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ದಿನಾಂಕ 12.03.2022 ರಂದು ಏರ್ಪಡಿಸಲಾಗಿತ್ತು. ಅಧ್ಯಕ್ಷತೆಯನ್ನು ಡಾ. ಶಿವಣ್ಣ ಎನ್.ಕೆ. ಮಾಜಿ ಸೈನಿಕರು, ಭಾರತೀಯ ಸೇನೆ ಮತ್ತು ಅಂತರರಾಷ್ಟ್ರೀಯ ಕಬಡ್ಡಿ ಆಟಗಾರರು ಹಾಗೂ ಪ್ರೊ–ಕಬಡ್ಡಿಯ ನಿರೂಪಕರು, ನಿವೃತ್ತ ಸೈನಿಕರ ಸಂಘದ ಅಧ್ಯಕ್ಷರು ವಹಿಸಿದ್ದರು.

### 'ಪರೀಕ್ಷಾ ಆತಂಕ ನಿವಾರಣೆ' – ಉಪನ್ಯಾಸ



ದಿನಾಂಕ 11.03.2022ರಂದು ಕಾಲೇಜಿನ ವತಿಯಿಂದ ಪದವಿಪೂರ್ವ ವಿದ್ಯಾರ್ಥಿಗಳಿಗೆ 'ಪರೀಕ್ಷಾ ಆತಂಕ ನಿವಾರಣೆ–ಹೇಗೆ' ಎಂಬುದರ ಬಗ್ಗೆ ಬಿ.ಜಿ.ಎಸ್ ಕಾಲೇಜು ಮತ್ತು ಆಸ್ಪತ್ರೆಯ ಮನೋವೈದ್ಯಕೀಯ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಹರ್ಷ ಜಿ.ಟಿ. ಮಾತನಾಡಿದರು.

### ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ



2021–2022ನೇ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಬೇವೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ: 2.03.2022 ರಿಂದ 8.3.2022 ವರೆಗೆ ಆಯೋಜಿಸಲಾಗಿತ್ತು. ಪ್ರೊ. ಎಚ್.ಆರ್. ರವೀಶ್, ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ, ಬೆಂಗಳೂರು ವಿಶ್ವವಿದ್ಯಾಲಯ, ಇವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು

ಶೇಷಾದ್ರಿಪುರಂ

### ನಾಟಕ ಪ್ರದರ್ಶನ



ದಿನಾಂಕ 16.02.2022ರಂದು ಕಾಲೇಜಿನಲ್ಲಿ ನಂದನ ತಂಡದವರಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು. ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ಪಠ್ಯದಲ್ಲಿರುವ ನಾಟಕಗಳನ್ನು ಪರೀಕ್ಷಾ ದೃಷ್ಟಿಯಿಂದ ಸುಲಭವಾಗಿ ಬರೆಯಲು ಅನುಕೂಲವಾಗುವಂತೆ ಪ್ರದರ್ಶಿಸಲಾಯಿತು. ತಂಡದ ಮುಖ್ಯಸ್ಥರನ್ನು ಪ್ರಾಂಶುಪಾಲ ಪ್ರೊ. ಆರ್.ವಿ. ಮಂಜುನಾಥ್ ಅಭಿನಂದಿಸಿದರು.

"The path from dreams to success does exist. May you have the vision to find it, the courage to get on it and the perseverance to follow it." – Kalpana Chawla, Astronaut

# Reports

## Seshadripuram Education Trust
Seshadripuram

### SET Merit Scholarships Distribution 2021-22



On 18th Mar, 2022, distribution of SET Merit Scholarships 2021-22 was organized at Chowdaiah Memorial Hall, Bengaluru for the students of Seshadripuram College and Seshadripuram Institute of Commerce and Management. The chief guest for the event was Dr. Meena Deshpande, Director, Bharathiya Vidya Bhavan's Gandhi Centre of Science and Human Values, Bengaluru.

The program was presided by Nadoja Dr. Wooday P. Krishna, Hon. General Secretary, Sri W.D. Ashok, Trustee, Sri K. Krishnaswamy, Trustee, Sri. B.C. Loknath, Turstee, Dr. Meera. H.N. Principal, Seshadripuram College, Prof. Vidya Shivannavar, Principal, Seshadripuram Institute of Commerce and Management, Dr. Bhargavi, Director, PG Department, Seshadripuram college, witnessed the event.

Total 212 students received the scholarships. 89 students who had scored above 95% received the Management fee exemption. 7 students had secured cent percent score. Scholarship of Rs. 10,000 was distributed to 123 students scoring 90% - 94%. Total amount of 50 lakhs was distributed to the students as scholarships for the academic year 2021-22.

## Seshadripuram Institute of Commerce and Management
Seshadripuram

### International Women's Day Celebrations



On 9th Mar, 2022, ANKURA-Women Empowerment Forum of Seshadripuram Institute of Commerce and Management organized a Special Lecture Program on "Streetva: Ondu Jeevana Kale" on the occasion of International Women's Day Celebration and Silver Jubilee Celebration of Seshadripuram Composite Pre-University College in association with Seshadripuram Composite Pre-University College, Bengaluru.

Mata B. Manjamma Jogati, Padmashree Awardee and President of Karnataka Janapada Academy, Bengaluru was the chief guest of this mega event. In this program, Seshadripuram Educational Trust felicitated the other four women achievers from different disciplines. Smt. Sharada Siddi from Sports, Dr. P.V. Padmaja from the field of Education, Smt. Malathi Sharma from Art and Music and Smt. Prema Nadabatti from Public Service.

Nadoja Dr. Woody P. Krishna, Hon. General Secretary of Seshadripuram Educational Trust addressed the gathering by motivational thoughts and Sri. N.R. Panditaradhya, President, Seshadripuram Educational Trust, Bengaluru gave the presidential remarks.

## Seshadripuram Degree College
Mysuru

### "Commemoration to mark Centenary of Gandhi's arrival to Mysuru"



On 3rd Feb, 2022, Seshadripuram Degree College, Mysuru, NSS Unit, NCC Unit, in association with IQAC and Mysore Mahanagar Palike and District Adminstration, Mysuru had organized "Commemoration to mark Centenary of Gandhi's arrival in Mysuru." The program was inaugurated by S.T. Somashekar, District Minister, Mysuru by lighting lamp. The students sang the famous Gandhi Bhajan of the title 'Raghupati Raaghava'.

The President for the program was Nadoja Dr. Wooday P. Krishna, Hon. Gen. Secretary, Seshadripuram Educational Trust. In his presidential address he admired the greatness of Mahatma Gandhi by emphasizing his ideals and principles. He spoke about Mahatma Gandhi's contributions to the Freedom Movement, Harijan Movement and the upliftment of the society through the methods of Satyagraha, Non-Violence, Communal Harmony and Grama Swarajya.

Prof. Shivarajappa, Former Director, Department of Gandhi Studies, University of Mysore addressed the gathering and shed light on Mahatma Gandhi's contributions to Mysuru in naming Ashok Puram and Gandhi Nagar areas of Mysuru and recalled his significant visit to K R Mill Colony. Smt. Sunanda Paalanethra, Mayor of Mysuru appreciated proactive students at the event, for creating awareness on Mahatma Gandhi's principles and ideas. Sri S.T. Somashekar, District Minister, Mysuru, Sri Taniveer Sait, former minister, Government of Karnataka, graced the occasion.

"ಪರಿಸ್ಥಿತಿಗಳನ್ನು ಉತ್ತಮಪಡಿಸಲಾಗುವುದಿಲ್ಲ, ಆದರೆ ಅವುಗಳನ್ನು ಬದಲಾಯಿಸುವುದರಿಂದ ನಾವು ಉತ್ತಮರಾಗುತ್ತೇವೆ." – ಸ್ವಾಮಿ ವಿವೇಕಾನಂದ

# ಪ್ರೊ. ಮಲ್ಲೇಪುರಂ ಕೃತಿಗಳು – ವಿಚಾರ ಸಂಕಿರಣ

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ



ದಿ: 25.02.2022ರಂದು ಕಾಲೇಜಿನ ಕನ್ನಡ ವಿಭಾಗ ಮತ್ತು ಪ್ರೊ. ಮಲ್ಲೇಪುರಂ 70 ಅಭಿನಂದನಾ ಸಮಿತಿ, ಬೆಂಗಳೂರು ಇವರ ಸಹಯೋಗದಲ್ಲಿ "ಪ್ರೊ. ಮಲ್ಲೇಪುರಂ ಅವರ ಅನುಭಾವಿಕ ಕೃತಿಗಳು" ಎಂಬ ವಿಷಯ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಇಸ್ಕಾನ್ ಸಂಸ್ಥೆಯ ಸಾಮಾಜಿಕ ಸಂಪರ್ಕ ಸಮಿತಿಯ ಹಿರಿಯ ಕಾರ್ಯನಿರ್ವಾಹಕರಾದ ಶ್ರೀ ಕುಲಶೇಖರ ಚೈತನ್ಯದಾಸ ಅವರು ಆಗಮಿಸಿ ಮಾತನಾಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ "ಪ್ರೊ. ಮಲ್ಲೇಪುರಂರವರ ಬರವಣಿಗೆಗಳು ಲೋಕಮಾನ್ಯವಾಗಿವೆ. ಇವರ ಬರಹಗಳನ್ನು ಕುರಿತು ರಾಜ್ಯಮಟ್ಟದಲ್ಲಿ ಸಮಾರಂಭ ನಡೆಯಬೇಕು" ಎಂದು ಹೇಳಿದರು.

ಪ್ರೊ. ಮಲ್ಲೇಪುರಂ ಅವರ ಕೃತಿಗಳನ್ನು ಕುರಿತ ಮೂರು ವಿಚಾರಗೋಷ್ಠಿಗಳಲ್ಲಿ ಲೇಖಕರಾದ ವಿದ್ವಾನ್ ಜಗದೀಶ್ ಶರ್ಮಾ ಸಂಪ, ಉಪನ್ಯಾಸಕರುಗಳಾದ– ಡಾ. ಡಿ.ಸಿ. ಚಿತ್ರಲಿಂಗಯ್ಯ, ಡಾ. ಚಿತ್ತಯ್ಯ ಪೂಜಾರ್, ಡಾ. ಪ್ರೇಮಸಿದ್ದರಾಜು, ಡಾ. ಡಿ.ಎಸ್. ವಾಸುದೇವಮೂರ್ತಿ, ಡಾ. ಆರ್. ವಾದಿರಾಜ್ – ವಿಷಯ ಮಂಡಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ಮಲ್ಲೇಪುರಂ 70 ಅಭಿನಂದನಾ ಸಮಿತಿ, ಬೆಂಗಳೂರು ಇದರ ಕಾರ್ಯದರ್ಶಿಗಳಾದ ಡಾ. ಸಂತೋಷ ಬಿ. ಹಾನಗಲ್ ಮತ್ತು ಡಾ. ಪ್ರಕಾಶ್ ಆರ್. ಪಾಗೋಜಿರವರು ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಕಾಲೇಜು

ತುಮಕೂರು



ದಿನಾಂಕ 14.01.2022ರಂದು ತುಮಕೂರು ವಿಶ್ವವಿದ್ಯಾಲಯ, ಶೇಷಾದ್ರಿಪುರಂ ಕಾಲೇಜು ಮತ್ತು ಪ್ರೊ. ಮಲ್ಲೇಪುರಂ 70 ಅಭಿನಂದನಾ ಸಮಿತಿ ಸಹಯೋಗದಲ್ಲಿ 'ಪ್ರೊ. ಮಲ್ಲೇಪುರಂ ಅವರ ಸಂತಕೃತಿಗಳು' ಎಂಬ ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಯಿತು. ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿಯವರು ಸಾನಿಧ್ಯ ವಹಿಸಿ, ಮಾತನಾಡಿದರು. ಮುಖ್ಯ ಅತಿಥಿಗಳಾಗಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತುಮಕೂರು ವಿಶ್ವವಿದ್ಯಾಲಯದ ಕುಲಪತಿ ವೈ.ಎಸ್. ಸಿದ್ದೇಗೌಡ ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಪ್ರೊ. ಜಗದೀಶ ಜಿ.ಟಿ. ಮುಂತಾದವರು ಇದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು

ಮೈಸೂರು



ದಿನಾಂಕ 09.03.2022ರಂದು ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಪ್ರೊ. ಮಲ್ಲೇಪುರಂ 70 ಅಭಿನಂದನಾ ಸಮಿತಿ ಮತ್ತು ಶೇಷಾದ್ರಿಪುರಂ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ ಇವರ ಸಹಯೋಗದಲ್ಲಿ 'ಪ್ರೊ. ಮಲ್ಲೇಪುರಂ ಸಂಪಾದಿಸಿದ ಶಂಬಾ ಕೃತಿ ಸಂಪುಟಗಳು' ಎಂಬ ವಿಷಯವನ್ನು ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಯಿತು. ಪ್ರೊ. ಸಿ. ನಾಗಣ್ಣ, ಲೇಖಕರು ಹಾಗೂ ಸಂದರ್ಶಕ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಇವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

## ಶೇಷಾದ್ರಿಪುರಂ ಕಾಲೇಜು

ಶೇಷಾದ್ರಿಪುರಂ

### ಸರ್ವಧರ್ಮ ಸಾಮರಸ್ಯ – ಜೀವನ ಶೈಲಿ



ಶೇಷಾದ್ರಿಪುರಂ ಕಾಲೇಜಿನ ಪೋಸ್ಟ್ ಗ್ರಾಜುಯೇಟ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ರೋಟ್ರಾಕ್ಟ್ ಕ್ಲಬ್ ಆಫ್ ಶೇಷಾದ್ರಿಪುರಂ ಕಾಲೇಜು ಹಾಗೂ ಯುನೈಟೆಡ್ ರಿಲೀಜಿಯನ್ಸ್ ಇನಿಷಿಯೇಟಿವ್, ಇಂಡಿಯನ್ ಫೌಂಡೇಷನ್ ಫಾರ್ ಗ್ಲೋಬಲ್ ಪೀಸ್ ಎಜುಕೇಷನ್, ಮೈತ್ರಿ ಫೌಂಡೇಷನ್ ಇವರ ಸಹಯೋಗದಲ್ಲಿ ಫೆ.23ರಂದು 'ಸರ್ವಧರ್ಮ ಸಾಮರಸ್ಯ–ಜೀವನ ಶೈಲಿ' ಕಾರ್ಯಕ್ರಮ ನಡೆಯಿತು. ಸಮಾರಂಭಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ರಾಜೇಂದ್ರ, ಮಹಾಬೋಧಿ ಸೊಸೈಟಿ, ಬೆಂಗಳೂರು, ಮುರಳೀಧರನ್ ಶರ್ಮ, ಮುಖ್ಯಸ್ಥರು, ಸಂಸ್ಕೃತ ವಿಭಾಗ, ಶೇಷಾದ್ರಿಪುರಂ ಕಾಲೇಜು, ಸಂತೋಷ ರಾಯನ್, ಸಮಾಜ ಕಾರ್ಯಕರ್ತರು, ಜಿ.ಎಂ. ಶಿರಹಟ್ಟಿ, ಬೆಂಗಳೂರು ದೂರದರ್ಶನ ಕೇಂದ್ರ ಮಾಜಿ ನಿರ್ದೇಶಕರು ಇವರು ಆಗಮಿಸಿ ಮಾತನಾಡಿದರು. ಸಮಾರಂಭವನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಉದ್ಘಾಟಿಸಿದರು. ವೇದಿಕೆಯಲ್ಲಿ ಎಂ.ಎಸ್. ನಟರಾಜ್ ಚೇರ್ಮನ್, ಗೌರ್ನಿಂಗ್ ಕೌನ್ಸಿಲ್, ಪ್ರಾಂಶುಪಾಲರು ಡಾ. ಹೆಚ್.ಎನ್. ಮೀರಾ, ಡಾ. ಭಾರ್ಗವಿ ವಿ.ಆರ್., ನಿರ್ದೇಶಕರು, ಪಿ.ಜಿ. ಡಿಪಾರ್ಟ್‌ಮೆಂಟ್ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್

ಶೇಷಾದ್ರಿಪುರಂ

### "ಪದವಿ ಕನ್ನಡ ಪಠ್ಯ ಕಾರ್ಯಾಗಾರ"



ಕಾರ್ಯಕ್ರಮದ ಉದ್ಘಾಟನೆಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣರವರು ನೆರವೇರಿಸಿ ಮಾತನಾಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಿ.ಸಿ.ಯು. ಮೌಲ್ಯಮಾಪನ ಕುಲಸಚಿವರಾದ ಡಾ. ಬಿ. ರಮೇಶ್ ಅವರು ಆಗಮಿಸಿ "ಐಚ್ಛಿಕ ವಿಷಯಗಳಿಗಿಂತ ಭಾಷಾವಿಷಯಗಳು ಅದರಲ್ಲೂ ನಮ್ಮ ಪ್ರದೇಶದ ಭಾಷೆಯಾದ ಕನ್ನಡಭಾಷೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಹೇಗೆ ಪೂರಕವಾಗಿದೆ" ಎಂದು ತಿಳಿಸಿದರು. ಮತ್ತೊಬ್ಬ ಮುಖ್ಯ ಅತಿಥಿಗಳಾದ ಡೊಮಿನಿಕ್‌ರವರು ಕನ್ನಡ ಭಾಷೆಯಲ್ಲಾಗಿರುವ ಪಲ್ಲಟಗಳು ಸೇರಿದಂತೆ ಪ್ರಸ್ತುತ ಡಿಜಿಟಲ್ ಮಾಧ್ಯಮದ ಇತಿಮಿತಿಗಳ ಕುರಿತು ಪ್ರಸ್ತಾಪಿಸಿದರು. ಸಂಪನ್ಮೂಲ ವ್ಯಕ್ತಿಗಳಾದಂತಹ ಡಾ. ಕೆ.ವೈ. ನಾರಾಯಣಸ್ವಾಮಿ ಮತ್ತು ಡಾ. ಎಂ.ಎಸ್. ಆಶಾದೇವಿ ಮೊದಲಾದವರ ನೇತೃತ್ವದಲ್ಲಿ 2 ಮತ್ತು 4ನೇ ಸೆಮಿಸ್ಟರ್‌ನ ಎಲ್ಲಾ ಕನ್ನಡ ಪಠ್ಯಗಳ ಚರ್ಚೆ–ಸಂವಾದಗಳಾದವು. ಕಾಲೇಜು ಕನ್ನಡ ಸಂಘದ ವತಿಯಿಂದ ಡಾ. ಬೆಳಕೆರೆ ಲಿಂಗರಾಜಯ್ಯ, ಡಾ. ಜಿ. ರಾಜಗುಂಡಾಪುರ, ಡಾ. ಪ್ರೇಮಸಿದ್ದರಾಜು ಅವರು ಸಕ್ರಿಯವಾಗಿ ಭಾಗವಹಿಸಿದ್ದರು.

"I am grateful to be a woman. I must have done something great in another life." – Maya Angelou, Poet.

# ಶ್ರೀ ಕೆ.ಎಂ. ನಂಜಪ್ಪನವರ 110ನೇ ಜನ್ಮದಿನಾಚರಣೆ ಪ್ರಯುಕ್ತ ಸ್ವಯಂ ಪ್ರೇರಿತ ಬೃಹತ್ ರಕ್ತದಾನ ಮೇಳ

## ಶೇಷಾದ್ರಿಪುರಂ ಶಿಕ್ಷಣ ದತ್ತಿ

ಶೇಷಾದ್ರಿಪುರಂ ಸಮೂಹ ಸಂಸ್ಥೆಗಳು



**ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ವತಿಯಿಂದ ಶ್ರೀ ಕೆ.ಎಂ. ನಂಜಪ್ಪನವರ 110ನೇ ಜನ್ಮದಿನಾಚರಣೆ ಪ್ರಯುಕ್ತ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಆವರಣದಲ್ಲಿ ಫೆ. 18ರಂದು 'ರಕ್ತದಾನ ಮೇಳ' ನಡೆಯಿತು.**

ಮುಖ್ಯ ಅತಿಥಿಗಳಾಗಿ ಸಂಸತ್ ಸದಸ್ಯರಾದ ಪಿ.ಸಿ. ಮೋಹನ್ ಆಗಮಿಸಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಮುಂದಿನ ದಿನಗಳಲ್ಲಿ ಈ ಸಂಸ್ಥೆಯಲ್ಲಿ ಒಂದು ಲಕ್ಷ ವಿದ್ಯಾರ್ಥಿಗಳು ಓದುವಂತಾಗಲಿ" ಎಂದು ಹಾರೈಸಿದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್.ಆರ್. ಪಂಡಿತಾರಾಧ್ಯರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಶಿಕ್ಷಣ ಸಂಸ್ಥೆಗೆ ನಂಜಪ್ಪನವರ ಕೊಡುಗೆಯನ್ನು ಸ್ಮರಿಸಿದರು. ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಭಾಗವಹಿಸಿ ಮಾತನಾಡುತ್ತಾ, "ಕೆ.ಎಂ. ನಂಜಪ್ಪರವರು ಆರು ದಶಕಕ್ಕೂ ಹೆಚ್ಚು ಕಾಲ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದು, 40 ವರ್ಷಗಳ ಅವಧಿ ಇದರ ಅಧ್ಯಕ್ಷರಾಗಿದ್ದು, ಪ್ರಪ್ರಥಮ ಬಾರಿಗೆ ಸಂಜೆ ಕಾಲೇಜು ಪ್ರಾರಂಭಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ" ಎಂದು ಅವರ ಕೊಡುಗೆಯನ್ನು ಶ್ಲಾಘಿಸಿದರು. ಶಿಬಿರದಲ್ಲಿ ರಾಜುಚಂದ್ರಶೇಖರ್, ಗೌರವ ಸಹಾಯಕ ಕಾರ್ಯದರ್ಶಿ ಎಂ.ಎಸ್. ನಟರಾಜ್, ಧರ್ಮದರ್ಶಿ ಕೆ. ಕೃಷ್ಣಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

## ಶೇಷಾದ್ರಿಪುರಂ ಕಾಮರ್ಸ್ ಕಾಲೇಜು

ಮಾಗಡಿ ರಸ್ತೆ, ಬೆಂಗಳೂರು



ಬೆಂಗಳೂರು ಐ.ಕ್ಯು.ಎ.ಸಿ., ಯೂತ್ ರೆಡ್ ಕ್ರಾಸ್, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಹಾಗೂ ಭಾರತೀಯ ರೆಡ್ ಕ್ರಾಸ್ ಬ್ಲಡ್ ಬ್ಯಾಂಕ್ ಕರ್ನಾಟಕ, ಲಯನ್ಸ್ ಕ್ಲಬ್ ಮತ್ತು ಸ್ವಯಂ ರಕ್ತ ದಾನಿಗಳ ಸಂಘ ಸಹಯೋಗದೊಂದಿಗೆ ದಿ: 17.02.2022 ರಂದು ರಕ್ತದಾನ ಶಿಬಿರ ನಡೆಯಿತು. ಅಧ್ಯಕ್ಷತೆಯನ್ನು ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್ ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾದ ಅಮಿತ ಹೆಚ್. ವಾಧರ್ ಆಗಮಿಸಿದ್ದರು.

## ಶೇಷಾದ್ರಿಪುರಂ ಕಾಲೇಜು

ತುಮಕೂರು



ಕಾಲೇಜಿನಲ್ಲಿ ನಡೆದ ರಕ್ತದಾನ ಶಿಬಿರದ ಉದ್ಘಾಟನೆಯನ್ನು ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ. ಕೆ. ಶಿವಚಿತ್ತಪ್ಪ ನವರು ಮಾಡಿದರು. ನಾಡೋಜ ಡಾ. ವೂಡೇ ಪಿ. ಕೃಷ್ಣ, ಡಾ. ರಾಜು ಚಂದ್ರಶೇಖರ್, ಜಾನಪದ ವಿದ್ವಾಂಸ ಡಾ. ಮೀರಾಸಾಬೀಹಳ್ಳಿ ಶಿವಣ್ಣ, ಪ್ರಾಂಶುಪಾಲರಾದ ಪ್ರೊ. ಜಗದೀಶ ಜಿ.ಟಿ. ಮತ್ತಿತರರು ಭಾಗವಹಿಸಿದ್ದರು.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ



ಕರ್ನಾಟಕ ಸ್ವಯಂ ರಕ್ತದಾನಿಗಳ ಒಕ್ಕೂಟ ಭಾರತೀಯ ರೆಡ್ ಕ್ರಾಸ್ ರಕ್ತ ನಿಧಿ, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಕರ್ನಾಟಕ ನಾಗರಿಕ ರಕ್ಷಣಾ ದಳ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 08.02.2022 ರಂದು ರಕ್ತದಾನ ಶಿಬಿರ ನಡೆಯಿತು. ಅಧ್ಯಕ್ಷತೆಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಆಗಮಿಸಿದ್ದರು. ಸಮಾರಂಭದಲ್ಲಿ ಡಾ ರಾಜು ಚಂದ್ರಶೇಖರ್, ಧರ್ಮದರ್ಶಿಗಳು, ಡಬ್ಲ್ಯು.ಡಿ. ಅಶೋಕ್ ಕಾಲೇಜು ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಬಿ.ಎ. ಅನಂತ್ ರಾವ್, ಪ್ರಾಂಶುಪಾಲರಾದ ಡಾ. ಮಂಜುನಾಥ್, ಪ್ರೊ. ಜಯರಾಂ, ಪೊಲೀಸ್ ಇನ್ಸ್‌ಪೆಕ್ಟರ್ ಸಿ. ವಸಂತ್, ರೋಟರಿ ಸಂಸ್ಥೆಯ ಶ್ರೀಕಾಂತ್ ಭಗವತ್ ಹಾಗೂ ಕರ್ನಾಟಕ ರಾಜ್ಯದ ಎನ್.ಎಸ್.ಎಸ್ ಅಧಿಕಾರಿಯಾದ ಪ್ರತಾಪ್ ಲಿಂಗಯ್ಯ ಮತ್ತಿತರರು ಹಾಜರಿದ್ದರು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ



ಕಾಲೇಜಿನ ಆವರಣದಲ್ಲಿ 'ಬೃಹತ್ ರಕ್ತದಾನ ಶಿಬಿರ' ನಡೆಯಿತು. ಶಿಬಿರದಲ್ಲಿ ಸುಮಾರು 421 ಯೂನಿಟ್ ರಕ್ತವನ್ನು ಸಂಗ್ರಹಿಸಿ ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸಿ ಕೊಡಲಾಯಿತು. ಶಿಬಿರವನ್ನು ನಿವೃತ್ತ ನ್ಯಾಯಾಧೀಶ ಪದ್ಮವಿಭೂಷಣ ಎಂ.ಎನ್. ವೆಂಕಟಾಚಲಯ್ಯನವರು ಉದ್ಘಾಟಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳು ನಾಡೋಜ ಡಾ. ವೂಡೇ ಪಿ. ಕೃಷ್ಣ ರಕ್ತದಾನಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯದಲ್ಲಿ ರಕ್ತದ ಕೊರತೆ ಹೆಚ್ಚಾಗಿ ಕಾಣುತ್ತಿದೆ, ಹಾಗಾಗಿ ರಕ್ತದಾನ ಶಿಬಿರಗಳನ್ನು ಹೆಚ್ಚಾಗಿ ಆಯೋಜಿಸಿ ನಾವೆಲ್ಲರೂ ರಕ್ತದಾನ ಮಾಡುವ ಮೂಲಕ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರು ಶ್ರೀ ಎನ್.ಆರ್ ಪಂಡಿತಾರಾಧ್ಯರು, ಪದ್ಮಶ್ರೀ ಪುರಸ್ಕೃತ ಕೆ.ವೈ. ವೆಂಕಟೇಶ್, ರಾಜು ಚಂದ್ರಶೇಖರ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಹಾಯಕ ಕಾರ್ಯದರ್ಶಿ ನಟರಾಜ್, ಧರ್ಮದರ್ಶಿ ವಿಜಯ್ ಕುಮಾರ್, ಪ್ರಾಂಶುಪಾಲರು ಡಾ. ವೆಂಕಟೇಶ್, ಕೆ. ಪ್ರಕಾಶ್, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು

ಮೈಸೂರು



ರಾಷ್ಟ್ರೀಯ ಸೇವಾ ಯೋಜನಾ ಘಟಕ, ರಾಷ್ಟ್ರೀಯ ಸೈನ್ಯ ದಳ, ಯೂತ್ ರೆಡ್ ಕ್ರಾಸ್ ಘಟಕ, ಐಕ್ಯೂಎಸಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಇವರ ಸಹಯೋಗದಲ್ಲಿ ದಿನಾಂಕ 01.02.2022ರಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಿತು. ಮುಖ್ಯ ಅತಿಥಿಗಳಾಗಿ ಡಾ. ಡಿ. ತಿಮ್ಮಯ್ಯ, ವಿಧಾನ ಪರಿಷತ್ ಸದಸ್ಯರು, ಮೈಸೂರು ಮತ್ತು ಚಾಮರಾಜನಗರ ಕ್ಷೇತ್ರ, ಇವರು ಆಗಮಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ, ಇವರು ವಹಿಸಿದ್ದು ರಕ್ತದಾನಿಗಳನ್ನು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ರಾಜು ಚಂದ್ರಶೇಖರ್, ಪ್ರೊ. ಸೌಮ್ಯ ಈರಪ್ಪ ಕೆ. ಮತ್ತಿತರರು ಉಪಸ್ಥಿತರಿದ್ದರು.

"ನಿಜವಾದ ಶಿಕ್ಷಕನೆಂದರೆ ಮಕ್ಕಳ ಮಟ್ಟಕ್ಕೆ ಇಳಿದು ತನ್ನ ಆತ್ಮವನ್ನು ವಿದ್ಯಾರ್ಥಿಗಳ ಆತ್ಮಕ್ಕೆ ವರ್ಗಾಯಿಸುವವನು." – ಸ್ವಾಮಿ ವಿವೇಕಾನಂದ